**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 22-09-2023.**

**ಪಾಟೀ ಸವಾಲು - ಪ್ರತಿವಾದಿ ಸಂಖ್ಯೆ 6, 8, 7(ಎ) ಯಿಂದ (ಸಿ) ಪರ ವಕೀಲರಿಂದ :**

**1)** ನಾನು ಅವಿದ್ಯಾವಂತ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ಈ ದಾವೆ ದಾಖಲಿಸಲು ನಮ್ಮ ವಕೀಲರಿಗೆ ನಾನು ಸ್ವತಃ ಮಾಹಿತಿ ನೀಡಿರುತ್ತೇನೆ. ನನ್ನ ತಂದೆಯ ಹೆಸರು ದೊಡ್ಡಯ್ಯ ಉರುಫ್ ದೊಡ್ಡಭೋವಿ ಆಗಿರುತ್ತದೆ. ನಮ್ಮ ತಂದೆಗೆ ದಾವ ಸ್ವತ್ತು ಯಾವ ಇಸವಿಯಲ್ಲಿ ಬಂತು ಎಂದು ನನಗೆ ಗೊತ್ತಿಲ್ಲ. 2008 ರಲ್ಲಿ ನಾನು ಭೋವಿಪಾಳ್ಯದಲ್ಲಿ ವಾಸವಿದ್ದೆ. ನಾನು ಬೆಂಗಳೂರಿನ ತಿಗಳರ ಪಾಳ್ಯದಲ್ಲಿ ವಾಸವಿರುತ್ತೇನೆ. ನನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ಬೆಂಗಳೂರಿನ ಪೀಣ್ಯಾದ ಕರಿಹೋಬನಹಳ್ಳಿಯಲ್ಲಿ ವಾಸವಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ನಾನು ಕರಿಹೋಬನಹಳ್ಳಿಗೆ ಹೋಗಿ 20 ವರ್ಷ ಆಗಿರುತ್ತದೆ. ನವರತ್ನ ಅಗ್ರಹಾರ ಜೋಡಿದಾರರ ಆಡಳಿತಕ್ಕೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಊರಿನ ಜೋಡಿದಾರರು ಶ್ರೀನಿವಾಸ್ ಮೂರ್ತಿ ಎಂದರೆ ಸರಿ. ನನ್ನ ತಂದೆ ವಿಶೇಷ ಜಿಲ್ಲಾಧಿಕಾರಿಗಳಿಗೆ ತನ್ನ ಹಕ್ಕನ್ನು ಅನುಮೋದಿಸಬೇಕು ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ವಿಶೇಷ ಇನಾಂ ಜಿಲ್ಲಾಧಿಕಾರಿಗಳು ನಮ್ಮ ತಂದೆಯ ಅರ್ಜಿಯನ್ನು ಗ್ರಾಮಸ್ಥರ ಇತರೆ ಅರ್ಜಿಗಳ ಜೊತೆಯಲ್ಲಿ ವಿಚಾರಣೆ ಮಾಡಲು ಬೆಂಗಳೂರಿನ ಜಿಲ್ಲಾಧಿಕಾರಿಳಿಗೆ ರವಾನೆ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಜಿಲ್ಲಾಧಿಕಾರಿಗಳು ನಮ್ಮ ತಂದೆಯ ಅರ್ಜಿಯನ್ನು ದೇವನಹಳ್ಳಿಯ ಭೂ ನ್ಯಾಯ ಮಂಡಳಿಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಭೂ ನ್ಯಾಯ ಮಂಡಳಿಯವರು ನಮ್ಮ ತಂದೆಗೆ ನವರತ್ನ ಅರ್ಗಹಾರದ ಸರ್ವೆ ಸಂಖ್ಯೆ 74 ರಲ್ಲಿ 1 ಎಕರೆ 8 ಗುಂಟೆ ಜಮೀನನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮುನಿಯಪ್ಪ ಬಿನ್ ರಾಮ ಭೋವಿ ಎಂದರೆ ನಮ್ಮ

ತಂದೆಯ ತಮ್ಮ. ಅವರಿಗೆ ಸರ್ವೆ ಸಂಖ್ಯೆ 74 ರಲ್ಲಿ 24 ಗುಂಟೆಯ ಬಗ್ಗೆ ಮಂಜೂರಾತಿ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಮ್ಮ ತಂದೆ ಮರಣ ಹೊಂದಿ ಎಷ್ಟು ವರ್ಷ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.1 ವಂಶವೃಕ್ಷವನ್ನು ನಾನು ಹಾಜರುಪಡಿಸಿರುತ್ತೇನೆ. ನಿ.ಪಿ.1 ಕ್ಕೆ ಮಾಹಿತಿ ನೀಡಿದ ಡಿ. ಕೃಷ್ಣಪ್ಪ ನಮ್ಮ ಅಣ್ಣ. ಸದರಿ ಕೃಷ್ಣಪ್ಪ ಅವರು ನೀಡಿದ ಮಾಹಿತಿಯಂತೆ ನಿ.ಪಿ.1 ನ್ನು ಬರೆದಿರುತ್ತಾರೆ ಎಂದರೆ ಸರಿ. ಸದರಿ ಕೃಷ್ಣಪ್ಪ ಈ ದಾವೆಯ 4 ನೇ ಪ್ರತಿವಾದಿ ಎಂದರೆ ಸರಿ. 4 ನೇ ಪ್ರತಿವಾದಿ ನನ್ನ ಜೊತೆ ಶಾಮೀಲಾಗಿ ನಿ.ಪಿ.1 ಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ನ್ನು ಬರೆಯುವಾಗ ನಾನು 4 ನೇ ಪ್ರತಿವಾದಿಗೆ ಆಧಾರ್ ಕಾರ್ಡ್‌ಗಳು, ಭಾವಚಿತ್ರಗಳು ಇತ್ಯಾದಿ ದಾಖಲೆಗಳನ್ನು ನೀಡಿರಲಿಲ್ಲ. ಕಾನೂನಿನ ದೃಷ್ಟಿಯಿಂದ ನಿ.ಪಿ.1 ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ಸಂಖ್ಯೆ 74 ವಿಸ್ತೀರ್ಣ 1 ಎಕರೆ 8 ಗುಂಟೆ ಆಗಿರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ಮಿಲಿಟರಿಯವರ ಜಾಗ, ಪಶ್ಚಿಮಕ್ಕೆ ಮುನಿವೆಂಕಟಪ್ಪ ಅವರ ಜಾಗ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಸ್ಮಶಾನ ಇರುತ್ತವೆ. ನಾನು, ನಮ್ಮ ತಾಯಿ, 4 ನೇ ಪ್ರತಿವಾದಿ ಹಾಗೂ ನಾರಾಯಣ ಅವರ ಪರವಾಗಿ ನಮ್ಮ ತಾಯಿ ಚೌಡಮ್ಮ ಸೇರಿ ದಿ.21-02-1985 ರಂದು ವೆಂಂಕಟಪ್ಪ ಅವರಿಗೆ ಕ್ರಯದ ಕರಾರನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದ ಪ್ರಕಾರ ವೆಂಕಟಪ್ಪ ಅವರಿಂದ ರೂ.12 ಸಾವಿರ ಪಡೆದು ಅವರಿಗೆ ಸ್ವಾಧೀನವನ್ನು ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರಕ್ಕೆ ಚನ್ನಪ್ಪ ಮತ್ತು ಕಾಟಪ್ಪ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿ.03-10-1985 ರಂದು 4 ನೇ ಪ್ರತಿವಾದಿ ಸದರಿ ವೆಂಕಟಪ್ಪ ಅವರಿಗೆ ದಾವಾ ಆಸ್ತಿಯನ್ನು ಕ್ರಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ರಾಮಭೋವಿಯವರ ಮಗ ಮುನಿಯಪ್ಪ ಅವರೂ ಸಹ 24 ಗುಂಟೆ ಜಮೀನಿನ ಬಗ್ಗೆ ಕ್ರಯಪತ್ರವನ್ನು ವೆಂಕಟಪ್ಪ ಅವರಿಗೆ ಜಾರಿಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ನಾನು ಹಾಜರುಪಡಿಸಿದ್ದು ಅದನ್ನು ನಿ.ಪಿ.10 ಎಂದು ಗುರುತಿಸಲಾಗಿದೆ ಎಂದರೆ ಸರಿಯಲ್ಲ. ನಿ.ಪಿ.10 ರ ಅಡಿಯಲ್ಲಿ ವೆಂಕಟಪ್ಪ ಅವರ ಕಡೆಯಿಂದ

ಕ್ರಯದಾರರಿಗೆ 10 ಸಾವಿರ ರೂಪಾಯಿ ಸಂದಾಯ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ ವೆಂಕಟಪ್ಪ ಅವರು ಆಧಾರ ಪತ್ರ ಮಾಡಿ ಸಾಲ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. 1985-86 ರಿಂದ 1996-97 ರ ವರೆಗೆ ಸದರಿ ವೆಂಕಟಪ್ಪ ಅವರ ಹೆಸರಿನಲ್ಲಿ ಇರುವ ಪಹಣಿ ಪತ್ರಿಕೆಗಳನ್ನು ನಾನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಸದರಿ ವೆಂಕಟಪ್ಪ ತೆಂಗು ಮತ್ತು ಸೀಬೆ ಬೆಳೆಗಳನ್ನು ಬೆಳೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವೆಂಕಟಪಪ್ಪ ಅವರು ಕೊಳವೆ ಬಾವಿಯನ್ನೂ ಸಹ ಅಳವಡಿಸಿದ್ದು ಅದು ಈಗ ನೀರು ಇಲ್ಲದೇ ಬತ್ತಿ ಹೋಗಿದೆ ಎಂದರೆ ನಾನು ನೋಡಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ನಾನಾಗಲೀ ಅಥವಾ 1 ರಿಂದ 5 ನೇ ಪ್ರತಿವಾದಿಗಳಾಗಲೀ ಸ್ವಾಧೀನದಲ್ಲಿ ಇಲ್ಲ ಎಂದರೆ ಈ ದಾವೆ ದಾಖಲಿಸಿದ ನಂತರ ಸ್ವಾಧೀನದಲ್ಲಿ ಇಲ್ಲ ಎಂದು ನುಡಿಯುತ್ತೇನೆ. ನಾನು ಸ್ವಾಧೀದಲ್ಲಿ ಇಲ್ಲದೇ ಇದ್ದರೂ ಸಹ 1 ರಿಂದ 5 ನೇ ಪ್ರತಿವಾದಿಗಳ ಜೊತೆ ಶಾಮೀಲಾಗಿ 7 ನೇ ಪ್ರತಿವಾದಿಯ ವಾರಸುದಾರರು ಹಾಗೂ 8 ನೇ ಪ್ರತಿವಾದಿಯ ಸ್ವತ್ತನ್ನು ಕಬಳಿಸುವ ಏಕೈಕ ಉದ್ದೇಶದಿಂದ ಸುಳ್ಳು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೆಂಕಟಪ್ಪ ಅವರು ದಿ.12-12-1997 ರಂದು ನಿಧನರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವೆಂಕಟಪ್ಪ ಅವರು ಅವರ ಜೀವಿತಾವಧಿಯಲ್ಲಿ 7 ಮತ್ತು 8 ನೇ ಪ್ರತಿವಾದಿಗಳ ಪರವಾಗಿ ಮರಣ ಶಾಸನ ಬರೆದು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನೂ ಸಹ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಲ್ ನಾಮೆಯನ್ನು ಬರೆಯುವ ಕಾಲಕ್ಕೆ ವೆಂಕಟಪ್ಪ ಅವರು ಮಾನಸಿಕ ಮತ್ತು ದೈಹಿಕವಾಗಿ ಸದೃಢರಾಗಿದ್ದರು ಎಂದರೆ ಸರಿಯಲ್ಲ. ಸದರಿ ವಿಲ್ ನಾಮೆಗೆ ನಾನು ಬಾಧ್ಯಸ್ಥ ಎಂದರೆ ಸರಿಯಲ್ಲ. ದಿ.03-10-1985 ರ ಕ್ರಯಪತ್ರ ಮತ್ತು ಮೇಲೆ ಹೇಳಿದ ವಿಲ್ ನಾಮೆ ಕಾನೂನುಬದ್ಧವಾಗಿದೆ ಎಂದರೆ ಸರಿಯಲ್ಲ.

**ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**